ಅ) *ಬಿಜಾಪುರ ಜಿಲ್ಲೆಯ ನಂದಿ ಸಹಕಾರ ಸಕ್ಕರೆ ಕಾರ್ಖಾನೆ ದಿನ ನಿತ್ಯ ಎಷ್ಟು ಟನ್ ಸಕ್ಕರೆ ಉತ್ಪಾದಿಸುತ್ತಿದೆ. ಈಗಾಗಲೆ ಎಷ್ಟು ಟನ್ ಸಕ್ಕರೆ ಸಂಗ್ರಹವಿದೆ.*

ಆ) *ನಂದಿ ಸಹಕಾರ ಸಕ್ಕರೆ ಕಾರ್ಖಾನೆಯ ಈ ವರ್ಷದ ಲಾಭವೆಷ್ಟು? ಈ ಕಾರ್ಖಾನೆಯಲ್ಲಿ ತಾಂತ್ರಿಕ ಸಾಮಗ್ರಿಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದ್ದರೆ ಹೊಸ ಯಂತ್ರೋಪಕರಣಗಳನ್ನು ಯಾವಾಗ ಅಳವಡಿಸುವಿರಿ?*

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ ವಿಜ್ಞಾನ ತಂತ್ರಕಲೆ ಪರಿಸರ ಹಾಗೂ ಜೀವ ಪರಿಸ್ಥಿತಿ ರಾಜ್ಯ ಸಚಿವರು) :

ಅ) ದಿನ ನಿತ್ಯ ಉತ್ಪಾದನೆಯಾಗುವ ಸಕ್ಕರೆಯ ಪ್ರಮಾಣವು ಆಯಾಯ ಸಕ್ಕರೆ ಕಾರ್ಖಾನೆಯು ನುರಿಸುವ ಕಬ್ಬಿನ ಪ್ರಮಾಣವನ್ನು ಅವಲಂಬಿಸಿರುತ್ತದೆ. ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ಕಬ್ಬು ಅರೆಯುವ ದಿನವಹಿ ಸಾಮರ್ಥ್ಯ 2500ಟನಗಳಾಗಿರುತ್ತದೆ. ಇಲ್ಲಿಯ ವರೆಗೆ ಕಾರ್ಖಾನೆಯ ಸರಾಸರಿ ದಿನ ನಿತ್ಯ ಸುಮಾರು 2300 31-1-96ಕ್ಕೆ 2,09,110 ಕ್ವಿಂಟಾಲ್ ಸಕ್ಕರೆ ದಾಸ್ತಾನು ಸಂಗ್ರಹವಿದೆ.

ಆ) ನಂದಿ ಸಹಕಾರಿ ಸಕ್ಕರೆ ಕಾರ್ಖಾನೆಯ 94-95ನೇ ಸಾಲಿನಲ್ಲಿ ರೂ. 31 ಲಕ್ಷ ನಷ್ಟ ಅನುಭವಿಸಿರುತ್ತದೆ. ಕಾರ್ಖಾನೆಯು ತನ್ನ ದಿನವಹಿ ಕಬ್ಬು ಅರೆಯುವ ಸಾಮರ್ಥ್ಯಕ್ಕೆ ತಕ್ಕಂತೆ ಸತತವಾಗಿ ಕಬ್ಬು ಅರೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮಟ್ಟಕ್ಕೆ ಕೆಲಸ ನಿರ್ವಹಿಸದಿರುವುದು ಕಾರಣವೆಂಬುದಾಗಿಯೂ ತಿಳಿದು ಬಂದಿದೆ. ಈ ವಿಷಯಕ್ಕೆ ಸಂಬಂಧಿದಂತೆ ತಾಂತ್ರಿಕ ವರದಿಯನ್ನು ಸಹಕಾರ ಸಕ್ಕರೆ ಕಾರ್ಖಾನೆಗಳ ಮಹಾ ಮಂಡಲದಿಂದ ತಾಂತ್ರಿಕ ನ್ಯೂನತೆಗಳನ್ನು ದುರಸ್ಥಿ ಮಾಡಿ ಸರಿಪಡಿಸಲು ಸಾಧ್ಯವಾಗದಿದ್ದಲ್ಲಿ ಹಾಗೂ ಹೊಸ ಯಂತ್ರೋಪಕರಣಗಳ ಅಳವಡಿಕೆ ಅನಿವಾರ್ಯವೆಂದು ಕಂಡು ಬಂದಲ್ಲಿ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು.

ಭೀಮಾ ಸಕ್ಕರೆ ಕಾರ್ಖಾನೆಯಿಂದ ಸಂಗ್ರಹಿಸಲಾದ ಪೇರುಹಣ

568 - ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ, ಪರಿಸರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಇಂಡಿ ತಾಲ್ಲೂಕಿನಲ್ಲಿ ನಿರ್ಮಿಸಬೇಕೆನ್ನುವ ಭೀಮಾ ಸಕ್ಕರೆ ಕಾರ್ಖಾನೆಗೆ ರೈತರಿಂದ ಸಂಗ್ರಹವಾದ ಶೇರು ಹಣವೆಷ್ಟು, ಇನ್ನೂ ಶೇರು ಹಣ ಸಂಗ್ರಹಿಸಬೇಕು?*

ಆ) *ಈ ಕಾರ್ಖಾನೆಗೆ ರಾಜ್ಯ ಸರ್ಕಾರದಿಂದ ಎಷ್ಟು ಹಣ ಬಿಡುಗಡೆಮಾಡಲಾಗಿದೆ ಹಾಗೂ ಕೇಂದ್ರದಿಂದ ಎಷ್ಟು ಹಣ ಬಿಡುಗಡೆಯಾಗಬೇಕು?*

ಇ) *ಈ ಕಾರ್ಖಾನೆ ಎಷ್ಟು ದಿನಗಳಲ್ಲಿ ಮುಗಿಯುವುದು ಈ ಯೋಜೆ ಕುರಿತು ಸಂಪೂರ್ಣ ವರದಿಯನ್ನು ಸರ್ಕಾರದವರು ನೀಡುವರೆ?*

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ ಜವಳಿ, ವಿಜ್ಞಾನ ತಂತ್ರಕಲೆ ಪರಿಸರ ಹಾಗೂ ಜೀವಪರಿಸ್ಥಿತಿ ರಾಜ್ಯ ಸಚಿವರು) :

ಅ) ರೂ 100.00 ಲಕ್ಷ

ಸುಮಾರು ರೂ. 320.00 ಲಕ್ಷ

ಆ) ಇನ್ನೂ ಬಿಡುಗಡೆಯಾಗಿರುವುದಿಲ್ಲ.

ಇ) ಈ ಕಾರ್ಖಾನೆಗೆ ಇನ್ನೂ ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರಾಗಿರುವುದಿಲ್ಲ. ಯೋಜನಾ ವೆಚ್ಚ4200ಲಕ್ಷ ರೂ. ಅಂದಾಜು ಮಾಡಿದ್ದು ಅದನ್ನು ಭರಿಸುವ ವಿಧಾನ ಈ ಕೆಳಕಂಡಂತೆ ಇದೆ.

1.	ಸದಸ್ಯರ ಶೇರು ಬಂಡವಾಳ ಯೋಜನಾವೆಚ್ಚ	ಶೇ. 10
2.	ಸರ್ಕಾರದಿಂದ ಪಾಲು ಬಂಡವಾಳ	ಶೇ. 30
3.	ಹಣಕಾಸು ಸಂಸ್ಥೆಗಳಿಂದ ಸಾಲ	ಶೇ. 60

ಮೇಲ್ಕಂಡ ಪ್ರಕಾರ ಸುಮಾರು2500ಲಕ್ಷ ರೂ. ಸಾಲವನ್ನು ಉನ್ನತ ಹಣಕಾಸು ಸಂಸ್ಥೆಗಳಿಂದ ಮಂಜೂರು ಆಗಬೇಕಾಗಿರುತ್ತದೆ. ಈ ಸಾಲ ಪಡೆಯಲು ಪ್ರಯತ್ನ ನಡೆಯುತ್ತಿದ್ದು ಕಾರ್ಖಾನೆಯ ನಿರ್ಮಾಣ ಕಾರ್ಯ ಮುಗಿಯುವುದು ಸಾಲ ಮಂಜೂರಾತಿಯನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಹೊಸ ಕಾರ್ಖಾನೆಯನ್ನು ನಿರ್ಮಾಣ ಮಾಡಲು ಸುಮಾರು 20 ತಿಂಗಳು ಅಗತ್ಯವಿರುತ್ತದೆ. ಈ ಕಾರ್ಖಾನೆಯ ನಿರ್ಮಾಣಕ್ಕೆ ಬೇಕಾದ ನಿವೇಶನ ಪಡೆಯುವ ಕ್ರಮ ಮುಗಿದಿದೆ.

ಆರಾಧನ ಯೋಜನೆಯಲ್ಲಿ ಧಾರವಾಡ ಜಿಲ್ಲೆಗೆ ಬಿಡುಗಡೆಯಾದ ಹಣ

570 - ಶ್ರೀ ಯು.ಬಿ. ಬಣಕಾರ್ (ಹಿರೇಕೇರೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಾಧನಾ ಯೋಜನೆಯಡಿಯಲ್ಲಿ ಧಾರವಾಡ ಜಿಲ್ಲೆಗೆ 1994-95, 1995-96ನೇ ಸಾಲಿಗೆ ತಾಲ್ಲೂಕುವಾರು ನಿಗಧಿ ಮಾಡಿದ ಗುರಿ ಎಷ್ಟು, ಬಿಡುಗಡೆಯಾದ ಹಣವೆಷ್ಟು, ಖರ್ಚಾದ ಹಣವೆಷ್ಟು.

ಆ) ಧಾರವಾಡ ಜಿಲ್ಲೆಯ ಜಿಲ್ಲಾ ಸಮಿತಿ ಮಾಡಲಾಗಿದೆಯೇ, ಹಾಗಿಲ್ಲದಿದ್ದಲ್ಲಿ ಎಂದು ಮಾಡಲಾಗುವುದು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಧಾರವಾಡ ಜಿಲ್ಲೆಗೆ 1994-95ನೇ ಸಾಲಿನಲ್ಲಿ ಬಿಡುಗಡೆಯಾದ ಹಣ ರೂ. 46,78,216.00 1995-96ನೇ ಸಾಲಿನಲ್ಲಿ ಇನ್ನು ಹಣ ಬಿಡುಗಡೆಯಾಗಿಲ್ಲ ತಾಲ್ಲೂಕುವಾರು ಗುರಿ ನಿಗದಿಪಡಿಸಿಲ್ಲ.1994-95ರಲ್ಲಿ ಆರಾಧನಾ ಸಮಿತಿಗಳು ರದ್ದಾದುದರಿಂದ ಯಾವುದೇ ಕಾಮಗಾರಿಗಳನ್ನು ಕೈಗೊಂಡಿಲ್ಲ ಹಾಗೂ ಹಣ ಖರ್ಚಾಗಿರುವುದಿಲ್ಲ.